ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

**ಸಂಖ್ಯೆ: ಸಿ4(2) ಪ್ರೌ.ಶಾ..ಸ.ಶಿ.ಜೇ.ಪಟ್ಟಿ/01/2020.21** **ದಿನಾಂಕ:24.06.2022**

**ಅಧಿಸೂಚನೆ**

ವಿಷಯ :- ದಿನಾಂಕ:01.01.2021ರಲ್ಲಿ ಇದ್ದಂತೆ ಮೈಸೂರು ವಿಭಾಗದ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕರಡನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ :-1] ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಿ4(2)ಪ್ರೌ.ಶಾ. ಸ.ಶಿ.ಜೇ.ಪ.01/2021-22 ದಿನಾಂಕ: 07.04.2022,

2] ಈ ಕಛೇರಿಯ ಸಮ ಸಂಖ್ಯೆ: ದಿನಾಂಕ; 15.06.2022

3] ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕ.ಪ್ರೌ.ಶಿಪ. ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ ಇವರ ಪತ್ರ ಸಂಖ್ಯೆ: ಜೆ12/ಸ.ಪ್ರೌ.ಶಿ/ಜೇ. ಪಟ್ಟಿ13/2021-22 ದಿನಾಂಕ: 22.06.2022

****

ಉಲ್ಲೇಖ(1)ರಲ್ಲಿ ದಿನಾಂಕ:01.01.2021ರಲ್ಲಿ ಇದ್ದಂತೆ ಮೈಸೂರು ವಿಭಾಗದ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ವೃಂದದ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಿರುವುದನ್ನು ಉಲ್ಲೇಖ(2)ರ ದಿನಾಂಕ: 15.06.2022ರಂದು ಸರ್ಕಾರದ ಆದೇಶದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಹಿಂಪಡೆಯಲಾಗಿದೆ. ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ ರವರು ಉಲ್ಲೇಖ(3)ರನ್ವಯ ವಿವಿಧ ದಿನಾಂಕಗಳಂದು ಜಿಲ್ಲಾ ಮಟ್ಟದಲ್ಲಿ ಮತ್ತು ವಿಭಾಗೀಯ ಮಟ್ಟದಲ್ಲಿ ಪರಿಶೀಲನಾ ಸಮಿತಿಗಳನ್ನು ರಚಿಸುವ ಮೂಲಕ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಹಾಗೂ ಈ ಕೆಳಕಂಡ ಅಂಶಗಳೊಂದಿಗೆ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

1. 1993-94ನೇ ಸಾಲಿನಲ್ಲಿ ನೇಮಕ ಹೊಂದಿದ ಶಿಕ್ಷಕರ ವಿಳಾಸ ಸ್ಟಾರ್ ಎಂದು ಜೇಷ್ಠತಾ ಪಟ್ಟಿಯಲ್ಲಿದ್ದು ಶೇಕಡವಾರು ಮೆರಿಟ್‌ನಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ 01/01/2019ರಲ್ಲಿ ಪ್ರಕಟವಾದಂತೆಯೇ01-01-2021ರ ಜೇಷ್ಠತಾಪಟ್ಟಿಯನ್ನು ಮುಂದುವರೆಸಲಾಗಿದೆ.
2. 01-01-2021 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಕೆಲವು ಶಿಕ್ಷಕರ ಶಾಲೆಯ ವಿಳಾಸ, ಸೇವೆಗೆ ಸೇರಿ ದಿನಾಂಕ, ಇತ್ಯಾಧಿಗಳು ಭರ್ತಿಯಾಗದೆ ಸ್ಟಾರ್ (****) ಎಂದು ನಮೂದಿಸಲ್ಪಟ್ಟಿರುತ್ತದೆ. ಅಂತಹ ಶಿಕ್ಷಕರು ತಮ್ಮ ಜಿಲ್ಲೆಯ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿ ಉಪನಿರ್ದೇಶಕರ ದೃಢೀಕರಣದೊಂದಿಗೆ ಸಲ್ಲಿಸಿದ್ದಲ್ಲಿ ಸೂಕ್ತ ಕ್ರಮ ವಹಿಸಲಾಗುವುದು. ಇಲ್ಲವಾದಲ್ಲಿ ಉಪನಿರ್ದೇಶಕರಿಂದ ವಿಭಾಗದ ಯಾವುದೇ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ದೃಢೀಕರಣ ಪಡೆದು ಅಂತಹ ಶಿಕ್ಷಕರಿಗೆ ಷರಾ ಕಾಲಂನಲ್ಲಿ Not working in the Division ಎಂದು ನಮೂದಿಸಲಾಗುವುದು.
3. ಗ್ರಾಮೀಣ ಕೃಪಾಂಕದಡಿಯಲ್ಲಿ 1997-98ರಲ್ಲಿ ನೇಮಕ ಹೊಂದಿದ ಶಿಕ್ಷಕರುಗಳನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಪ್ರಕಾರ ದಿನಾಂಕ:11-11-1998ರ ನಂತರ ನೇಮಕ ಹೊಂದಿದ ಶಿಕ್ಷಕರುಗಳ ಗ್ರಾಮೀಣ ಕೃಪಾಂಕ ರಹಿತವಾಗಿ ಪರಿಷ್ಕರಿಸಿದಾಗ 133 ಶಿಕ್ಷಕರನ್ನು ಸೇವೆಯಿಂದ ಅನರ್ಹಗೊಳಿಸಿ ಆದೇಶಿಸಲಾಗಿದೆ. ತದನಂತರ ಸರ್ಕಾರದ ಹಂತದಲ್ಲಿ ತೀರ್ಮಾನಿಸಿ ದಿನಾಂಕ: 12-11-2003ರ ಅಧಿಸೂಚನೆ ಪ್ರಕಾರ ಅನರ್ಹಗೊಂಡ ಶಿಕ್ಷಕರನ್ನು ಮರು ನೇಮಕ ಮಾಡಲಾಗಿದೆ. ಈ ರೀತಿ ಮರುನೇಮಕಗೊಂಡ ಶಿಕ್ಷಕರುಗಳಿಗೆ ಜೇಷ್ಠತೆಗೆ ಪರಿಗಣಿಸುವ ಕುರಿತು ಸರ್ಕಾರಿ ಆದೇಶ ಸಂಖ್ಯೆ: ಇಡಿ 263 ಎಲ್.ಬಿ.ಪಿ. 2007 ದಿನಾಂಕ: 07-01-2008ರ ಪುಟ ಸಂಖ್ಯೆ: 2ರ ಕೊನೆಯ ಕಂಡಿಕೆಯಲ್ಲಿ ಸರ್ಕಾರವು ಸೂಚಿಸಿದಂತೆ ಮರು ನೇಮಕಗೊಂಡ ದಿನಾಂಕದಿಂದಲೇ ಜೇಷ್ಠತೆಯನ್ನು ಪರಿಗಣಿಸುವಂತೆ ನಿರ್ದೇಶನ ನೀಡಿರುತ್ತದೆ.

01/01/2019ರ ಜೇಷ್ಠತಾ ಪಟ್ಟಿಯಲ್ಲಿ 1997-98 ನೇ ಸಾಲಿನಲ್ಲಿ ಗ್ರಾಮೀಣ ಕೃಪಾಂಕ ರಹಿತವಾಗಿ ನೇಮಕಗೊಂಡು ಅನರ್ಹರಾದ 133 ಶಿಕ್ಷಕರುಗಳಲ್ಲಿ 68 ಶಿಕ್ಷಕರು ಮರು ನೇಮಕವಾಗಿದ್ದು ಇವರುಗಳನ್ನು ಮರುನೇಮಕಗೊಂಡ ದಿನಾಂಕದಿಂದ ಅಂದರೆ ದಿನಾಂಕ: 12.11.2003ರ ಅಧಿಸೂಚನೆಯಂತೆ 2002-03ರ ಬ್ಲಾಕ್‌ನಲ್ಲಿ ಜೇಷ್ಠತೆಯನ್ನು ಪರಿಗಣಿಸಿದೆ.

4. 01-01-2019ರ ಜೇಷ್ಠತಾ ಪಟ್ಟಿ ಪ್ರಕಟಗೊಂಡ ನಂತರ ಪ್ರಾಥಮಿಕ ಶಾಲೆಯಿಂದ 400 ಶಿಕ್ಷಕರು ಪ್ರೌಢಶಾಲಾ ಶಿಕ್ಷಕರಾಗಿ ಬಡ್ತಿ ಹೊಂದಿದ್ದು ಹಾಗೂ ಒಬ್ಬರು ಪ್ರೌಢ ಶಾಲಾ ಸಹ ಶಿಕ್ಷಕರು ಅಂತರ್ ವಿಭಾಗದಿಂದ ವರ್ಗಾವಣೆಗೊಂಡಿದ್ದು ಮೈಸೂರು ವಿಭಾಗದ ಉಪ ನಿರ್ದೇಶಕರುಗಳಿಂದ ಸ್ವೀಕೃತವಾದ ಮಾಹಿತಿಯಂತೆ 401 (ಪಿ.ಆರ್-400, ಟಿ.ಆರ್-01) ಶಿಕ್ಷಕರುಗಳನ್ನು ಹೊಸ ಸೇರ್ಪಡೆ ಮಾಡಿದೆ.

5. ಮೈಸೂರು ವಿಭಾಗದ ಉಪ ನಿರ್ದೇಶಕರುಗಳಿಂದ ಸ್ವೀಕೃತವಾದ ಮಾಹಿತಿಯಂತೆ 108 (ಡಿ.ಆರ್-20, ಪಿ.ಆರ್-26 ಟಿ.ಆರ್-62) ಶಿಕ್ಷಕರನ್ನು ಸೂಕ್ತ ಬ್ಲಾಕ್‌ಗಳಲ್ಲಿ ಸೇರಿಸಿದೆ.

6. ಈ ಕಛೇರಿಯ ಅಧಿಸೂಚನೆ ಸಂಖ್ಯೆ ಸಿ4(2) ಪ್ರಾ.ಶಾ.ಶಿ.ಜೇ: 11/2014-15 ದಿನಾಂಕ: 03-03-2016 ರ ಅಧಿಸೂಚನೆಯಂತೆ ಪ್ರಕಟಿಸಲಾದ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ವೃಂಧದ 371 – ಜೆ (ಸಿ.ಬಿ.ಜಡ್, ಪಿ.ಸಿ.ಎಂ, ಕಲಾ, ಭಾಷಾ ಶಿಕ್ಷಕರು ಹೈದ್ರಾಬಾದ್ ಕರ್ನಾಟಕ ಮೀಸಲಾತಿ ಪ್ರಕಾರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಅಭಿಮತ ನೀಡಿ ಸೇರ್ಪಡೆಯಾಗಿರುವ ನಾಲ್ಕು ಜನ ಶಿಕ್ಷಕರುಗಳು (ಶ್ರೀಮತಿ ಜಯಲಕ್ಷ್ಮಿ ದೇಸಾಯಿ, ಸ.ಶಿ, ಎಸ್ ಸುವರ್ಣ. ಸ.ಶಿ, ಆಶಾಕಲಿ. ಸ.ಶಿ ಮತ್ತು ಜನ್ನತಾಭಿನದಾಫ್ ಸ.ಶಿ) ಇವರುಗಳು ಮೇಲಿನ ಆದೇಶದಂತೆ ಈ ಆಯುಕ್ತಾಲಯದಲ್ಲಿ ತಯಾರಿಸಿರುವ ದಿನಾಂಕ: 01.01.2015ರಲ್ಲಿ ಇದ್ದಂತೆ 371ಜೆ ಪಟ್ಟಿಯಲ್ಲಿ ಸೇರಿರುತ್ತಾರೆ. ಅದ್ದರಿಂದ ಇವರುಗಳ ಹೆಸರನ್ನು ಈ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.

ಈ ಮೇಲಿನಂತೆ ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ ಇವರು ತಾತ್ಕಾಲಿಕ ಜೇಷ್ಠತಾ ಪಟ್ಟಿ ತಯಾರಿಸಿ ಸಲ್ಲಿಸಿರುವ ಸದರಿ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇಲಾಖಾ ವೆಬ್ ಸೈಟ್‌ನಲ್ಲಿ [**www.schooleducation.kar.nic.in** ರಲ್ಲಿ] ಪ್ರಕಟಿಸಲಾಗಿದೆ.

ಈ ಕರಡು ತಾತ್ಕಾಲಿಕ ಪಟ್ಟಿಗೆ ಸಂಬಂಧಿಸಿದಂತೆ ಜಿಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ವ್ಯಾಪಕ ಪ್ರಚಾರ ಮಾಡುವುದು. ಮುಂದುವರೆದು ಸಂಘದ ಪದಾಧಿಕಾರಿಗಳಿಗೆ ಮತ್ತು ಸಹ ಶಿಕ್ಷಕರಿಗೆ ಕರಡು ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಿರುವ ಬಗ್ಗೆ ಸಾಮಾಜಿಕ ಜಾಲ ತಾಣಗಳ ಮೂಲಕ ಹಾಗೂ ಸ್ಥಳೀಯ ಪತ್ರಿಕೆಗಳ ಮೂಲಕ ಪ್ರಚುರ ಪಡಿಸುವುದು.

ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕರಡು ಪ್ರಕಟಣೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಕುರಿತು ಕೆಳಕಂಡಂತೆ ವೇಳಾ ಪಟ್ಟಿಯನ್ನು ನಿಗಧಿಪಡಿಸಿದೆ. ಈ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಸಮರ್ಥನಿಯ ಪೂರಕ ದಾಖಲೆಗಳೊಂದಿಗೆ ನಿಗಧಿತ ದಿನಾಂಕದೊಳಗೆ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಇವರಿಗೆ ನಿಗಧಿತ ನಮೂನೆಯಲ್ಲಿ ನೇರವಾಗಿ ಸಲ್ಲಿಸುವುದು. ಈ ಸಂಬಂಧ ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಹೆಸರು ಇರುವ ಪುಟದ ಮುದ್ರಿತ ಪ್ರತಿಯನ್ನು **[Print out copy]** ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಬೇರೆ ಕಛೇರಿಗಳಿಗೆ / ಈ

ಕಛೇರಿಗೆ ಸಲ್ಲಿಸಲಾದ ಮನವಿಗಳನ್ನು ಮತ್ತು ನಿಗಧಿತ ದಿನಾಂಕದೊಳಗೆ ಸಲ್ಲಿಕೆಯಾಗದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಉಪನಿರ್ದೇಶಕರು(ಆಡಳಿತ)ರವರು ನೋಡಲ್ ಅಧಿಕಾರಿಗಳು ಹಾಗೂ ಸಂಬಂಧಿಸಿದ ಕಾರ್ಯನಿರ್ವಾಹಕರ ಸಹಯೋಗದೊಂದಿಗೆ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ನಿಯಾಮಾನುಸಾರ ಸರಿಪಡಿಸುವುದು. ಅಗತ್ಯವಿದ್ದಲ್ಲಿ ನಿಯಮಗಳನ್ನು ಉಲ್ಲೇಖಿಸಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡುವುದು. ತದನಂತರ ತಮ್ಮ ಜಿಲ್ಲೆಯ ಕ್ರೋಢೀಕೃತ ಪಟ್ಟಿಯೊಂದಿಗೆ ಮೈಸೂರು ವಿಭಾಗೀಯ ಸಹ ನಿರ್ದೇಶಕರ ಕಛೇರಿಗೆ ನಿಗದಿತ ದಿನಾಂಕದೊಳಗೆ ಹಾಜರಾಗಿ ತಿದ್ದುಪಡಿಗಳನ್ನು ಸರಿಪಡಿಸುವ ಬಗ್ಗೆ ಕ್ರಮವಹಿಸುವುದು. ಈ ಎಲ್ಲಾ ಕ್ರಮಗಳ ನಂತರ ಮೈಸೂರು ವಿಭಾಗೀಯ ಸಹ ನಿರ್ದೇಶಕರು ಅವರ ಹಂತದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯ ಕರಡನ್ನು ತಯಾರಿಸಲು ತುರ್ತಾಗಿ ಕ್ರಮವಹಿಸುವುದು. ಈ ಕ್ರಮದ ಪೂರ್ವದಲ್ಲಿ ಸಹ ನಿರ್ದೇಶಕರು ಮೈಸೂರು ವಿಭಾಗದ ಕಛೇರಿಯ ನಿರ್ದಿಷ್ಟ ಅಧಿಕಾರಿ/ ಸಿಬ್ಬಂದಿಗಳನ್ನು ಗುರುತಿಸಿ ಸೂಕ್ತ ಕಛೇರಿ ಆದೇಶಗಳನ್ನು ಹೊರಡಿಸುವ ಮೂಲಕ ಜವಾಬ್ದಾರಿಯನ್ನು ನಿಗದಿ ಪಡಿಸುವುದು. ಯಾವುದೇ ನ್ಯೂನ್ಯತೆ ಮತ್ತು ಗೊಂದಲಗಳು ಪುನಃ ಕಂಡುಬಂದಲ್ಲಿ ಸದರಿ ಅಧಿಕಾರಿ / ಸಿಬ್ಬಂದಿ ವರ್ಗದವರನ್ನೇ ನೇರಹೊಣೆಗಾರನ್ನಾಗಿ ಮಾಡಲಾಗುವುದು. ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸಿದ ತರುವಾಯ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಿದೆ.

ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರು ತಾತ್ಕಾಲಿಕ ಕರಡು ಸೇವಾ ಜೇಷ್ಠತಾ ಪಟ್ಟಿಯಲ್ಲಿ ಎಲ್ಲಾ ಶಿಕ್ಷಕರ ವಿವರಗಳನ್ನು ಹಾಗೂ ಖಾಲಿ ಬಿಟ್ಟಿರುವ ಶಾಲೆಯ ವಿಳಾಸ, ಕರ್ತವ್ಯಕ್ಕೆ ಹಾಜರಾದ ದಿನಾಂಕಗಳು ಮುಂತಾದವುಗಳನ್ನು ಇನ್ನೊಮ್ಮೆ ಪರಿಶೀಲಿಸಿಕೊಂಡು ತಪ್ಪಿದ್ದಲ್ಲಿ ಸರಿಯಾದ ಮಾಹಿತಿಯನ್ನು ಪಡೆದು ಎಲ್ಲಾ ಕಾಲಂಗಳನ್ನು ಪೂರ್ಣಗೊಳಿಸಿ ಸಂಬಂಧಿಸಿದ ಶಿಕ್ಷಕರ ಗಮನಕ್ಕೆ ತಂದು ಸಲ್ಲಿಸುವ ಪಟ್ಟಿಯಲ್ಲಿ ತಮ್ಮ ಹಂತದಲ್ಲಿ ಭರ್ತಿ ಮಾಡಿ ದೃಢೀಕರಣದೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸಿ ಸರಿಪಡಿಸುವ ಕ್ರಮವನ್ನು ಜವಾಬ್ದಾರಿಯಿಂದ ನಿರ್ವಹಿಸಲು ತಿಳಿಸಿದೆ ಹಾಗೂ ಮುಂದೇನಾದರೂ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಲೋಪದೋಷಗಳು ಕಂಡಬಂದಲ್ಲಿ ಅಂತಿಮ ಜೇಷ್ಠತಾ ಪಟ್ಟಿ ಸಲ್ಲಿಸುವ ಪ್ರಾಧಿಕಾರಿಗಳೇ ಹೊಣೆಗಾರಾಗುತ್ತೀರೆಂದು ಭಾವಿಸುವುದು.

**ಮೈಸೂರು ವಿಭಾಗದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ**

**ಕೈಗೊಳ್ಳಬೇಕಾದ ಕಾರ್ಯಗಳು ಹಾಗೂ ಕಾಲಮಿತಿ:**

| ಕ್ರಮ ಸಂಖ್ಯೆ | ಕಾರ್ಯ | ಜವಾಬ್ದಾರಿ | ನಿಗಧಿ ಪಡಿಸಿದ ಕಾಲಮಿತಿ |
|---|---|---|---|
| 1 | 2 | 3 | 4 |
| 1 | ಪ್ರಕಟಿಸಲಾದ ಕರಡು ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರು ಸಮರ್ಥನಿಯ ಪೂರಕ ದಾಖಲೆಗಳೊಂದಿಗೆ ನಿಗಧಿತ ಸಮಯದೊಳಗೆ ನಿಗದಿತ ನಮೂನೆಯಲ್ಲಿ ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸುವುದು. [ಇಲಾಖಾ ಅಂತರ್‌ಜಾಲದಲ್ಲಿ ಪ್ರಕಟಿಸಲಾದ ಪಟ್ಟಿಯಲ್ಲಿ ಹೆಸರು ಇರುವ ಪುಟದ ಮುದ್ರಿತ ಪ್ರತಿಯೊಂದಿಗೆ] | ಸಂಬಂಧಿಸಿದ ಸಹ ಶಿಕ್ಷಕರು | **30.06.2022 [ಕಛೇರಿಯ ಅವಧಿಯೊಳಗೆ]** |

| | | | |
|---|---|---|---|
| 2 | ಮೇಲ್ಕಂಡಂತೆ ಸಲ್ಲಿಕೆಯಾದ ಪಟ್ಟಿಯನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ಪರಿಶೀಲಿಸಿ ಕರಡು ದೃಢೀಕರಿಸಿ ಪೂರಕ ದೃಢೀಕೃತ ದಾಖಲೆಗಳೊಂದಿಗೆ ಆಯಾ ವಿಭಾಗೀಯ ಸಹ ನಿರ್ದೇಶಕರಿಗೆ ಹಾರ್ಡ್ ಮತ್ತು ಸಾಫ್ಟ್ ಪ್ರತಿಯಲ್ಲಿ ಸಲ್ಲಿಸುವುದು. | ಜಿಲ್ಲಾ ಉಪನಿರ್ದೇಶಕರು (ಆಡಳಿತ) | **04.07.2022** |
| 3 | ಅಂತಿಮ ಜೇಷ್ಠತಾ ಪಟ್ಟಿಯ ಕರಡನ್ನು ಅನುಮೋದನೆಗೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. | ಆಯ್ಕೆ ಪ್ರಾಧಿಕಾರಿಗಳು ಹಾಗೂ ವಿಭಾಗೀಯ ಸಹ ನಿರ್ದೇಶಕರು, ಮೈಸೂರು ವಿಭಾಗ. | **06.07.02022** |

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಕೃಷ್ಣಾಜಿ ಎಸ್. ಕರಿಚಣ್ಣವರ್)
ನಿರ್ದೇಶಕರು (ಪ್ರೌಢ ಶಿಕ್ಷಣ)

ಇವರಿಗೆ :

1. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳುರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಉಪನಿರ್ದೇಶಕರು(ಆಡಳಿತ) ಇವರ ಮುಖಾಂತರ ಮಾಹಿತಿಗಾಗಿ.

## ನಮೂನೆ

## 01/01/2021 ರಲ್ಲಿದ್ದಂತೆ ಮೈಸೂರು ವಿಭಾಗದ ಪ್ರೌಢಶಾಲಾ ಸಹಶಿಕ್ಷಕರ ಗ್ರೇಡ್-2 ವೃಂದದ ಕರಡು ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ (ಪ್ರಕಟಣೆ ದಿನಾಂಕ 24/06/2022)

| ವಿವರ | New Seniority No. | Old Seniority No. | Block Sl No. | Division | District Name | Candidate Name | Present Working School Name | Date of Birth | Sex | Qualification | Selection/ Promotion/ Transfer Date to Sec. School Asst G-2 in Mys Division | Entry into Service | Subject | Total Merit | Caste | DR/ PR/ TR | Master Degree | Remarks |
|---|---|---|---|---|---|---|---|---|---|---|---|---|---|---|---|---|---|---|
| ಹಾಲಿ ಇರುವ ವಿವರ | | | | | | | | | | | | | | | | | | |
| ತಿದ್ದುಪಡಿಯಾಗಬೇಕಿರುವ ವಿವರ | | | | | | | | | | | | | | | | | | |
| ಸಮರ್ಥನೆಯೊಂದಿಗೆ ಲಗತ್ತಿಸಿರುವ ದಾಖಲೆಗಳು | | | | | | | | | | | | | | | | | | |

ವಿಶೇಷ ಸೂಚನೆ: ಆಕ್ಷೇಪಣೆ ಸಲ್ಲಿಸುವ ಸಹಶಿಕ್ಷಕರು ನಮೂನೆಯೊಂದಿಗೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಕರಡು ಜೇಷ್ಠತಾಪಟ್ಟಿಯಲ್ಲಿ ಅವರ ಹೆಸರಿರುವ ಪುಟದ ಪ್ರಿಂಟ್‌ಔಟ್ ಪ್ರತಿ ಲಗತ್ತಿಸಿ ಸಲ್ಲಿಸಬೇಕು.

ದಿನಾಂಕ: ದೃಢೀಕರಣ ಶಿಕ್ಷಕರ ಹೆಸರು, ಸಹಿ

ಸ್ಥಳ: ಮುಖ್ಯಶಿಕ್ಷಕರ ಮೊಹರಿನೊಂದಿಗೆ ಮೊಬೈಲ್ ಸಂಖ್ಯೆ

ಉಪನಿರ್ದೇಶಕರ ಷರಾಗಳು:-

01. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ತಿದ್ದುಪಡಿಗಾಗಿ ಶಿಫಾರಸ್ಸು ಮಾಡಿದೆ.

ಅಥವಾ

02. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಈ ಕೆಳಕಂಡ ಕಾರಣಗಳಿಂದ/ಹಿಂದಿನ ಬದಿಯಲ್ಲಿ ತೋರಿದ ಕಾರಣಗಳಿಗಾಗಿ ತಿರಸ್ಕರಿಸಿದೆ.

ಪರಿಶೀಲಿಸಿ ದೃಢೀಕರಿಸಿದೆ

ಉಪನಿರ್ದೇಶಕರು (ಆಡಳಿತ)

ಸಾ.ಶಿ.ಇ. ________________ ಜಿಲ್ಲೆ